# ಭಾರತೀಯ ವಿಜ್ಞಾನ ಸಂಸ್ಥೆ

ಬೆಂಗಳೂರು

## 2021 ಪ್ರವೇಶಗಳು

ಪ್ರವೇಶ ಪಡೆಯಲು ಅರ್ಹ ಅರ್ಜಿದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ: (1)ನಿಯತ ಸಂಶೋಧನಾ ಕಾರ್ಯಕ್ರಮಗಳು

(ಪಿಎಚ್ ಡಿ / ಎಂ ಟೆಕ್ (ಸಂ) (2) ಕೋರ್ಸ್ ಕಾರ್ಯಕ್ರಮಗಳು (ಎಂ ಟೆಕ್ / ಎಂ ಡಿಎಸ್ / ಎಂ ಎಂಜಿಟಿ) , (3) ಸಂಯೋಜಿತ ಪಿಎಚ್ ಡಿ ಕಾರ್ಯಕ್ರಮಗಳು ಮತ್ತು (4) ಹೊರನೋಂದಣಿ ಕಾರ್ಯಕ್ರಮದ ಅಡಿಯಲ್ಲಿ ಪಿಎಚ್ ಡಿ . ಮುಂದಿನ ಪ್ಯಾರಾಗಳಲ್ಲಿ ಪ್ರವೇಶ ಕ್ರಿಯೆಯ ಸಾರಾಂಶವನ್ನು ನೀಡಲಾಗಿದೆ. IISc ವೆಬ್‌ಸೈಟ್‌ನ (ಅಂದರೆ, https://www.iisc.ac.in → ಪ್ರವೇಶಗಳು →ಕಾರ್ಯಕ್ರಮಗಳು) ಪ್ರತ್ಯೇಕ ಲಿಂಕ್‌ಗಳಲ್ಲಿರುವ ಅರ್ಹತೆ ಮಾನದಂಡಗಳು, ತಜ್ಞತೆವಿಷಯಗಳು , ಸಂಶೋಧನೆಯ ಕ್ಷೇತ್ರಗಳು, ಆಯ್ಕೆ ವಿಧಾನ ಮತ್ತು ಇತರ ವಿವರಗಳನ್ನು ಅರ್ಜಿದಾರರು ಓದಬೇಕೆಂದು ಸೂಚಿಸಲಾಗಿದೆ.

2021ರ ಜುಲೈ 31 ರೊಳಗೆ ಪದವಿ ಗಳಿಕೆಗೆ ಎಲ್ಲಾ ಅಗತ್ಯಗಳನ್ನು ( ಪರೀಕ್ಷೆಗಳು, ಪ್ರಾಜೆಕ್ಟ್ ಪ್ರಬಂಧಗಳು, ಮೌಖಿಕ ಪರೀಕ್ಷೆಗಳು ಇತ್ಯಾದಿ) ಪೂರ್ಣಗೊಳಿಸುವ ಭರವಸೆಯಿರುವ ತಮ್ಮ ಅರ್ಹತಾ ಪರೀಕ್ಷೆಗಳ ಕೊನೆಯ ಸೆಮಿಸ್ಟರ್ / ವರ್ಷದಲ್ಲಿರುವವರನ್ನು ಸೇರಿದಂತೆ ಶೈಕ್ಷಣಿಕ ಅರ್ಹತೆಯನ್ನು ಹೊಂದಿರುವ ಅರ್ಜಿದಾರರು ಮತ್ತು ಎಲ್ಲ ಅಗತ್ಯ ಪ್ರಮಾಣಪತ್ರಗಳನ್ನು 2021ರ ಅಕ್ಟೋಬರ್ 31 ರಂದು ಅಥವಾ ಮುಂಚಿತವಾಗಿ ಒದಗಿಸಬಲ್ಲವರು ಅರ್ಜಿ ಸಲ್ಲಿಸಲು ಅರ್ಹರು .

### 1. ಸಂಶೋಧನಾ ಕಾರ್ಯಕ್ರಮಗಳು (ಪಿಎಚ್ ಡಿ / ಎಂ ಟೆಕ್ (ಸಂಶೋಧನೆ))

### 1.1 ವಿಭಾಗಗಳು / ಕ್ಷೇತ್ರಗಳು

**ವಿಜ್ಞಾನ ವಿಭಾಗದಲ್ಲಿ ಪಿಎಚ್ ಡಿ:** ಖಗೋಳವಿಜ್ಞಾನ ಮತ್ತು ಖಗೋಳ ಭೌತಶಾಸ್ತ್ರ, ಜೀವರಸಾಯನಶಾಸ್ತ್ರ, ಪರಿಸರ ವಿಜ್ಞಾನ, ಉನ್ನತ ಶಕ್ತಿ ಭೌತಶಾಸ್ತ್ರ, ನಿರವಯವ ಮತ್ತು ಭೌತಿಕ ರಸಾಯನಶಾಸ್ತ್ರ, ಘನವಸ್ತು ಸಂಶೋಧನೆ, ಗಣಿತ, ಸೂಕ್ಷ್ಮ ಜೀವವಿಜ್ಞಾನ ಮತ್ತು ಜೀವಕೋಶ ಜೀವಶಾಸ್ತ್ರ, ಕಣಜೀವಭೌತಶಾಸ್ತ್ರ, ಕಣ ಪುನರುತ್ಪತ್ತಿ, ಬೆಳವಣಿಗೆ ಮತ್ತು ಜೀನುಶಾಸ್ತ್ರ ,ನರವಿಜ್ಞಾನ, ಸಾವಯವ ರಸಾಯನಶಾಸ್ತ್ರ, ಭೌತಶಾಸ್ತ್ರ ಮತ್ತು ಘನ ಸ್ಥಿತಿ ಮತ್ತು ರಚನೆ ರಸಾಯನಶಾಸ್ತ್ರ.

**ಎಂ ಟೆಕ್ (ಸಂಶೋಧನೆ) ಮತ್ತು ಎಂಜಿನಿಯರಿಂಗ್ ವಿಭಾಗದಲ್ಲಿ ಪಿಎಚ್ ಡಿ:** ವಾಯುಯಾನ /ಏರೋಸ್ಪೇಸ್ ಎಂಜಿನಿಯರಿಂಗ್, ವಾತಾವರಣ ಮತ್ತು ಸಾಗರ ವಿಜ್ಞಾನ ,ರಸಾಯನ ಎಂಜಿನಿಯರಿಂಗ್, ರಚನ /ಸಿವಿಲ್ ಎಂಜಿನಿಯರಿಂಗ್, ಕಂಪ್ಯೂಟರ್ ವಿಜ್ಞಾನ ಮತ್ತು ಆಟೋಮೇಷನ್, ಭೂವಿಜ್ಞಾನ, ಎಲೆಕ್ಟ್ರಿಕಲ್ ಸಂವಹನ ಎಂಜಿನಿಯರಿಂಗ್, ಎಲೆಕ್ಟ್ರಿಕಲ್ ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ ವ್ಯವಸ್ಥೆ ಎಂಜಿನಿಯರಿಂಗ್, ಉಪಕರಣರಚನೆ ಮತ್ತು ಅಳವಡಿಕೆ ಭೌತಶಾಸ್ತ್ರ , ನಿರ್ವಹಣೆ/ ಮ್ಯಾನೇಜ್ಮೆಂಟ್ ಅಧ್ಯಯನ (ಪಿಎಚ್ ಡಿ ಮಾತ್ರ), ಘನವಸ್ತು ಎಂಜಿನಿಯರಿಂಗ್, ಯಂತ್ರಕ/ಮೆಕ್ಯಾನಿಕಲ್ ಎಂಜಿನಿಯರಿಂಗ್, ಕಣ/ನ್ಯಾನೋ ವಿಜ್ಞಾನ ಮತ್ತು ಎಂಜಿನಿಯರಿಂಗ್ (ಪಿಎಚ್ ಡಿ ಮಾತ್ರ), ಪದಾರ್ಥ ವಿನ್ಯಾಸ ಮತ್ತು ತಯಾರಿಕೆ ,ನಿರಂತರತೆಯ ತಂತ್ರಜ್ಞಾನಗಳು ಮತ್ತು ಗಣಕೀಯ/ಕಂಪ್ಯೂಟೇಷನಲ್ ಮತ್ತು ಮಾಹಿತಿ ವಿಜ್ಞಾನ.

**ಅಂತರವಿಭಾಗೀಯ ಕ್ಷೇತ್ರಗಳಲ್ಲಿ ಪಿಎಚ್ ಡಿ:** ಜೀವವ್ಯವಸ್ಥೆ ವಿಜ್ಞಾನ ಮತ್ತು ಎಂಜಿನಿಯರಿಂಗ್ (ಜೀವವ್ಯವಸ್ಥೆ ವಿಜ್ಞಾನ ಮತ್ತು ಎಂಜಿನಿಯರಿಂಗ್ ಕೇಂದ್ರದಿಂದ), ಶಕ್ತಿ (ಶಕ್ತಿ ಸಂಶೋಧನೆ ಅಂತರವಿಭಾಗೀಯ ಕೇಂದ್ರ) , ಗಣಿತ ವಿಜ್ಞಾನ (ಐಐಎಸ್ಸಿ ಗಣಿತ ಮುಂದೊಡಗು), ಕಣವಿಜ್ಞಾನ/ನ್ಯಾನೊಸೈನ್ಸ್ ಮತ್ತು ಎಂಜಿನಿಯರಿಂಗ್ (ಕಣವಿಜ್ಞಾನ/ನ್ಯಾನೊಸೈನ್ಸ್ ಮತ್ತು ಎಂಜಿನಿಯರಿಂಗ್ ಕೇಂದ್ರದಿಂದ ), ಜಲ ಸಂಶೋಧನೆ (ಜಲ ಸಂಶೋಧನೆ ಅಂತರವಿಭಾಗೀಯ ಕೇಂದ್ರದಿಂದ) , ಸೈಬರ್ ಭೌತಿಕ ವ್ಯವಸ್ಥೆಗಳು (ರಾಬರ್ಟ್ ಬಾಷ್ ಸೆಂಟರ್ ಫಾರ್ ಫಿಸಿಕಲ್ ಸಿಸ್ಟಮ್ಸ್), ಹವಾಗುಣ ಬದಲಾವಣೆ (ದಿವೆಚಾ ಸೆಂಟರ್ ಫಾರ್ ಕ್ಲೈಮೆಟ್ ಚೇಂಜ್ ನಿಂದ ), ಮೆದುಳು ಮತ್ತು ಕೃತಕ ಬುದ್ಧಿಮತ್ತೆ (ಮೆದುಳು, ಕಂಪ್ಯೂಟೇಷನ್ ಮತ್ತು ಮಾಹಿತಿ ವಿಜ್ಞಾನ ಗುಂಪಿನಿಂದ ).

**1.2 ಅರ್ಹತೆ:** ಕೆಳಕಂಡ ವಿಭಾಗಗಳು /ಕ್ಷೇತ್ರಗಳಲ್ಲಿ ಕನಿಷ್ಠ ಎರಡನೇ ದರ್ಜೆಯ ಅಥವಾ ಸಮಾನ ಪದವಿ ಅರ್ಹತೆ ಹೊಂದಿರುವ ಅರ್ಜಿದಾರರು ಅರ್ಜಿ ಸಲ್ಲಿಸಲು ಅರ್ಹರು:

| ಕ್ರಮ ಸಂಖ್ಯೆ | ಅರ್ಹ ಪದವಿ | ರಾಷ್ಟ್ರೀಯ ಪ್ರವೇಶ ಪರೀಕ್ಷೆಗಳು(ಪ್ರವೇಶ ವಿಧಾನ) |
|---|---|---|
| 1 | ಎಂಜಿನಿಯರಿಂಗ್ / ತಂತ್ರಜ್ಞಾನ / 4 ವರ್ಷಗಳ ವಿಜ್ಞಾನ ಪದವಿ | ಮಾನ್ಯ ಗೇಟ್ ಅಂಕ / ನೆಟ್ ಜೆಆರ್ ಎಫ್ ಕಡ್ಡಾಯ |
| 2 | ವಿಜ್ಞಾನ ದಲ್ಲಿ ಸ್ನಾತಕೋತ್ತರ ಪದವಿ / ಅರ್ಥಶಾಸ್ತ್ರ, ಭೂಗೋಳ , ಮನೋವಿಜ್ಞಾನ, ನಿರ್ವಹಣೆ/ಮ್ಯಾನೇಜುಮೆಂಟ್, ವಾಣಿಜ್ಯ, ಕಾರ್ಯಾಚರಣೆ (ಆಪರೇಷನ್ಸ್) ಸಂಶೋಧನೆ, ಕಂಪ್ಯೂಟರ್ ವಿಜ್ಞಾನ / ಅಳವಡಿಕೆಗಳಲ್ಲಿ ಸ್ನಾತಕೋತ್ತರ ಪದವಿ, | ಮಾನ್ಯ ಗೇಟ್ ಅಂಕ / ನೆಟ್ ಜೆಆರ್ ಎಫ್ ಕಡ್ಡಾಯ |
| 3 | ಎಂಜಿನಿಯರಿಂಗ್ / ತಂತ್ರಜ್ಞಾನ / ವಾಸ್ತುಶಿಲ್ಪ / ಕೃಷಿ / ಔಷಧವಿಜ್ಞಾನ(ಫಾರ್ಮಸಿ) / | ಮಾನ್ಯ ಗೇಟ್ ಅಂಕ / ನೆಟ್ ಜೆಆರ್ ಎಫ್ / ಜಿಪಿಎಟಿ ಹೊಂದಿರುವುದು ಅಪೇಕ್ಷಣೀಯ |

| | | |
|---|---|---|
| | ಪಶುವೈದ್ಯಕೀಯ ವಿಜ್ಞಾನಗಳಲ್ಲಿ ಸ್ನಾತಕೋತ್ತರ ಪದವಿ | |
| 4 | ಎಂಎಸ್ / ಎಂಬಿಎ ( ಬಿಇ / ಬಿ ಟೆಕ್ / ಎಂ ಎಸ್ ಸಿ ನಂತರ ) - (ಮ್ಯಾನೇಜ್ಮೆಂಟ್ ಅಧ್ಯಯನ / ಪರಿಸರ ವಿಜ್ಞಾನ ವಿಭಾಗಗಳಿಗೆ ಅನ್ವಯಿಸುತ್ತದೆ) | ಮಾನ್ಯ ಗೇಟ್ ಅಂಕ / ನೆಟ್ ಜೆಆರ್ ಎಫ್ * ಹೊಂದಿರುವುದು ಅಪೇಕ್ಷಣೀಯ |
| 5 | ಕನಿಷ್ಠ 10 ರಲ್ಲಿ 8.5 ಅಥವಾ ಅದರ ಸಿಜಿಪಿಎ ಅಥವಾ ಅದಕ್ಕೆ ಸಮಾನ (ಪಿಎಚ್ ಡಿ ಗೆ ಮಾತ್ರ) ಅರ್ಹತೆಯಿರುವ ಯಾವುದೇ ಕೇಂದ್ರೀಯ ಅನುದಾನಿತ ತಾಂತ್ರಿಕ ಸಂಸ್ಥೆಯ ಕನಿಷ್ಠ ಯಾವುದೇ ನಾಲ್ಕು ವರ್ಷಗಳ ಕೋರ್ಸಿನ ಪದವೀಧರರು | ಮಾನ್ಯ ಗೇಟ್ ಅಂಕ / ನೆಟ್ ಜೆಆರ್ ಎಫ್ ಹೊಂದಿರುವುದು ಅಪೇಕ್ಷಣೀಯ |
| 6 | ಎಂಬಿಬಿಎಸ್ /ಎಂಡಿ | ಮಾನ್ಯ ಗೇಟ್ ಅಂಕ / ನೆಟ್ ಜೆಆರ್ ಎಫ್ ಹೊಂದಿರುವುದು ಅಪೇಕ್ಷಣೀಯ |
| 7 | ಬಿ ಫಾರ್ಮ್ | ಮಾನ್ಯ ಜಿಪಿಎಟಿ ಅಂಕ / ಜೆಆರ್ ಎಫ್ |
| 8 | ಎಂಒಇ/ ಯುಪಿಎಸ್ ಸಿ / ಎಐಸಿಟಿಇಗಳಿಂದ ಮಾನ್ಯವಾದ ವೃತ್ತಿಪರ ಸಂಸ್ಥೆಗಳ ಬಿ.ಇ. / ಬಿ.ಟೆಕ್ . ಸಮಾನ ಪರೀಕ್ಷೆಗಳು (ಉದಾ. ಎಂಜಿನಿಯರ್‌ಗಳ ಸಂಸ್ಥೆಗಳಿಂದ ನಡೆಯುವ ಎಎಂಐಇ ).<br>**ಗಮನಿಸಿ:** ಎಂಒಇನಿಂದ ಮಾನ್ಯವಾದ ವೃತ್ತಿಪರ ಸಂಘಗಳಲ್ಲಿ (ಉದಾ. ಎಎಂಐಇ) 31.05.2013 ರವರೆಗೆ ದಾಖಲಾಗಿರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರು. | ಮಾನ್ಯ ಗೇಟ್ ಅಂಕ / ನೆಟ್ ಜೆಆರ್ ಎಫ್ ಕಡ್ಡಾಯ |

**ಗಮನಿಸಿ:**

1. 2021ರ ಆಗಸ್ಟ್ 20 ರಂತೆ ಗೇಟ್ / ಜಿಪಿಎಟಿ / ನೆಟ್ ಜೆರ್ ಎಫ್ / ಇತರ ರಾಷ್ಟ್ರೀಯ ಪ್ರವೇಶ ಪರೀಕ್ಷೆಗಳು ಮಾನ್ಯವಾಗಿರಬೇಕು.

2. * ನೆಟ್ ಜೆಆರ್ ಎಫ್ ನಲ್ಲಿ ಜೆಆರ್ ಎಫ್ ಗೆ ಜಂಟಿ ಸಿಎಸ್ಐಆರ್-ಯುಜಿಸಿ ನೆಟ್; ಜೆಆರ್‌ಎಫ್‌ಗಾಗಿ ಯುಜಿಸಿ-ನೆಟ್; ಡಿಬಿಟಿ ಜೆಆರ್‌ಎಫ್; ಐಸಿಎಂಆರ್ ಜೆಆರ್ ಎಫ್; ಜೆಇಎಸ್ ಟಿ ; ಎನ್ ಬಿ ಎಚ್ ಎಂ ಸೇರುತ್ತವೆ.

ಪೂರ್ವ ಪರೀಕ್ಷೆ/ಸ್ಕ್ರೀನಿಂಗ್ ಟೆಸ್ಟ್ 2021; ನೆಟ್ ಜೆಆರ್ ಎಫ್ ನಲ್ಲಿ ಅರ್ಜಿ ಸಲ್ಲಿಸಲು ಅರ್ಹರಾಗಲು ಅರ್ಜಿದರರು ಕಿರಿಯ ಸಂಶೋಧನಾ ಫೆಲೋಷಿಪ್ ಅರ್ಹತೆ ಹೊಂದಿರಬೇಕು

3. ಐಎನ್ ಎಸ್ ಪಿ ಐ ಆರ್ ವಿಧಾನದ ಮೂಲಕ ಅರ್ಜಿಸಲ್ಲಿಸುವ ಅರ್ಜಿದಾರರು ಎರಡನೆಯ ಹಂತದ ಆಯ್ಕೆಗೆ ತಮ್ಮ ಅರ್ಜಿ ಪರಿಗಣಿನೆಗೆ ಒಂದು ಮಾನ್ಯವಾದ ತಾತ್ಕಾಲಿಕ ಐಎನ್ ಎಸ್ ಪಿ ಐ ಆರ್ ಹೊಂದಿರತಕ್ಕದ್ದು (ಸಂದರ್ಶನದ ಸಮಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನೀಡಿರುವಂತಹದ್ದು)

**1.3 ಆಯ್ಕೆ ವಿಧಾನ:** ರಾಷ್ಟ್ರೀಯ ಪ್ರವೇಶ ಪರೀಕ್ಷೆ ಮತ್ತು / ಅಥವಾ ಮೇಲಿನ ಟೇಬಲಿನಲ್ಲಿ ವಿವರಿಸಿದಂತೆ ಅರ್ಹತಾ ಪದವಿಯಲ್ಲಿ ಆನ್‌ಲೈನ್ ಸಂದರ್ಶನದ ಅವರ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆಮಾಡಲಾಗುತ್ತದೆ. ಆಯ್ಕೆಯು ಸಂದರ್ಶನದ ಕಾರ್ಯಕ್ಷಮತೆಯನ್ನು ಆಧರಿಸಿದೆ (ಕೆಲವು ವಿಭಾಗಗಳಲ್ಲಿ ಸಂದರ್ಶನ / ಕೊನೆಯ ಸಂದರ್ಶನಕ್ಕೆ ಮುಂಚಿತವಾಗಿ ಕೌಶಲ ಪರೀಕ್ಷೆ / ಪ್ರಾಥಮಿಕ ಸಂದರ್ಶನವಿರುತ್ತದೆ).

## 2. ಕೋರ್ಸ್ ಕಾರ್ಯಕ್ರಮಗಳು [ಎಂ ಟೆಕ್ / ಎಂ ಡಿಎಸ್ / ಎಂ ಎಂಜಿಟಿ]

### 2.1 ಎಂ ಟೆಕ್ ಕಾರ್ಯಕ್ರಮಗಳು

| **2.1.1 ವಿಭಾಗಗಳು/ಕಾರ್ಯಕ್ರಮಗಳು** | ***2.1.3 ಆಯ್ಕೆ ಕಾರ್ಯವಿಧಾನ*** |
|---|---|
| ವಾಯುಯಾನ /ಏರೋಸ್ಪೇಸ್ ಎಂಜಿನಿಯರಿಂಗ್, ರಸಾಯನ ಎಂಜಿನಿಯರಿಂಗ್, ರಚನ /ಸಿವಿಲ್ ಎಂಜಿನಿಯರಿಂಗ್, ಎಲೆಕ್ಟ್ರಿಕಲ್ ಎಂಜಿನಿಯರಿಂಗ್, ಉಪಕರಣರಚನೆ ವ್ಯವಸ್ಥೆಗಳು, ಘನವಸ್ತು ಎಂಜಿನಿಯರಿಂಗ್, ಯಂತ್ರಕ/ಮೆಕ್ಯಾನಿಕಲ್ ಎಂಜಿನಿಯರಿಂಗ್, ಸಂಕೇತ ಸಂಸ್ಕರಣೆ(ಸಿಗ್ನಲ್ ಪ್ರೊಸೆಸಿಂಗ್) | 100% ಗೇಟ್ ಅಂಕದ ಆಧಾರದಲ್ಲಿ |
| ಎಲೆಕ್ಟ್ರಾನಿಕ್ ವ್ಯವಸ್ಥೆ ಎಂಜಿನಿಯರಿಂಗ್, ಮೈಕ್ರೊಎಲೆಕ್ಟ್ರಾನಿಕ್ಸ್ ಮತ್ತು ವಿಎಲ್ ಎಸ್ ಐ ವಿನ್ಯಾಸ | 70% ಗೇಟ್ ಅಂಕ + 30% ಕೆರಿಯರ್ ಅನಾಲಿಸಿಸ್ ಅಂಕಗಳ ಆಧಾರದಲ್ಲಿ(CAM)* |
| ಹವಾಮಾನ ವಿಜ್ಞಾನ, ಭೂವಿಜ್ಞಾನ, ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ ಎಂಜಿನಿಯರಿಂಗ್, ಕಣ/ನ್ಯಾನೋ ವಿಜ್ಞಾನ ಮತ್ತು ಎಂಜಿನಿಯರಿಂಗ್ , ಕ್ವಾಂಟಂ ತಂತ್ರಜ್ಞಾನ , ರೊಬೋಟಿಕ್ಸ್ ಮತ್ತು ಆಟೊಮೇಷನ್ ವ್ಯವಸ್ಥೆಗಳು | 70% ಗೇಟ್ ಅಂಕ + 30% ಆನ್ ಲೈನ್ ಸಂದರ್ಶನದ ಕಾರ್ಯಕ್ಷಮತೆ ಆಧಾರದಲ್ಲಿ |
| ಕೃತಕ ಬುದ್ಧಿಮತ್ತೆ, ಕಂಪ್ಯೂಟರ್ ವಿಜ್ಞಾನ ಮತ್ತು ಎಂಜಿನಿಯರಿಂಗ್ | 70% ಗೇಟ್ ಅಂಕ + 30% ಆನ್ ಲೈನ್ ಬರಹ ಪರೀಕ್ಷೆಯ ಕಾರ್ಯಕ್ಷಮತೆ ಆಧಾರದಲ್ಲಿ |

| | |
|---|---|
| ಕಂಪ್ಯೂಟೇಷನಲ್ ಮತ್ತು ಡಾಟಾ ವಿಜ್ಞಾನಗಳು<br>ಸ್ಮಾರ್ಟ್ ತಯಾರಿಕೆ | 70% ಗೇಟ್ ಅಂಕ + 30% ಆನ್ ಲೈನ್ ಬರಹ ಪರೀಕ್ಷೆ<br>ಮತ್ತು ಸಂದರ್ಶನದ ಕಾರ್ಯಕ್ಷಮತೆ ಆಧಾರದಲ್ಲಿ |

**(CAM)*** 10/12/ಪದವಿ/ಸ್ನಾತಕಪದವಿ ಅಂಕಗಳು/ಜಿಪಿಎ ಆಧಾರದಲ್ಲಿ ಅರ್ಹತೆ ಅಂಕಗಳು ಎಂದರ್ಥ

**2.1.2 ಅರ್ಹತೆ**

ಅರ್ಜಿದಾರರು **2019/2020/2021 ಅಂಕದ ಮಾನ್ಯ ಗೇಟ್‌ನೊಂದಿಗೆ** ಆಯಾ ವಿಭಾಗಗಳು / ಕಾರ್ಯಕ್ರಮಗಳಿಗೆ ಅನ್ವಯವಾಗುವಂತೆ ಎಂಜಿನಿಯರಿಂಗ್ / ತಂತ್ರಜ್ಞಾನದ ಸೂಕ್ತ ವಿಷಯದ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ದ್ವಿತೀಯ ದರ್ಜೆ ಅಥವಾ ಸಮಾನ ಅರ್ಹತೆಯನ್ನು ಅಥವಾ ಎಂಒಇ/ ಯುಪಿಎಸ್ ಸಿ / ಎಐಸಿಟಿಇಗಳಿಂದ ಮಾನ್ಯವಾದ ವೃತ್ತಿಪರ ಸಂಸ್ಥೆಗಳ ಬಿ.ಇ. / ಬಿ.ಟೆಕ್ . ಸಮಾನ ಪರೀಕ್ಷೆಗಳು (ಉದಾ. ಎಂಜಿನಿಯರ್‌ಗಳ ಸಂಸ್ಥೆಗಳಿಂದ ನಡೆಯುವ ಎಎಂಐಇ ಅಥವಾ ಭೌತಿಕ ವಿಜ್ಞಾನ, ಗಣಿತ, ಅಂಕಿಅಂಶ, ಭೂವಿಜ್ಞಾನ, ಉಪಕರಣರಚನೆ, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಅಡವಳಿಕೆಗಳು/ಅಪ್ಲಿಕೇಶನ್‌ಗಳಲ್ಲಿ ಸ್ನಾತಕ ಪದವಿಯನ್ನು ಹೊಂದಿದ್ದರೆ ಅರ್ಜಿ ಸಲ್ಲಿಸಲು ಅರ್ಹರು

**ಗಮನಿಸಿ:** ಎಂಒಇ/ ಯುಪಿಎಸ್ ಸಿ / ಎಐಸಿಟಿಇಗಳಿಂದ ಮಾನ್ಯವಾದ ವೃತ್ತಿಪರ ಸಂಘಗಳೊಂದಿಗೆ (ಉದಾ. AMIE) 31.05.2013 ರವರೆಗೆ ದಾಖಲಾದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರು.

**2.1.3** ಎಂ ಟೆಕ್ ಕಾರ್ಯಕ್ರಮಗಳ ಆನ್‌ಲೈನ್ ಬರಹ ಪರೀಕ್ಷೆ ಹಾಗೂ ಸಂದರ್ಶನಗಳ ವೇಳಾಪಟ್ಟಿಯನ್ನು ಐಐಎಸ್ಸಿ ವೆಬ್‌ಸೈಟ್ www.iisc.ac.in/admissionsನ ಪ್ರಮುಖ ದಿನಗಳು ಪಟ್ಟಿಯಲ್ಲಿ ನೀಡಲಾಗುವುದು

.

**2.1.4 ಸಾಮಾನ್ಯ ಮಾನ್ಯತೆ ಒಪ್ಪಿಗೆ ಪೋರ್ಟಲ್ (ಸಿಒಎಪಿ)** ಅಭ್ಯರ್ಥಿಗಳಿಗೆ ಗೇಟ್ ಮೂಲಕ ಭಾಗಿದಾರ ಸಂಸ್ಥೆಗಳಲ್ಲಿ (ಐಐಎಸ್ಸಿ ಮತ್ತು ಐಐಟಿಗಳು). ಎಂ.ಟೆಕ್ ಪ್ರೋಗ್ರಾಂಗಳಿಗೆ ಪ್ರವೇಶಕ್ಕೆ ಅತಿ ಹೆಚ್ಚು ಆಯ್ಕೆ ಮಾಡಲು ಸಾಮಾನ್ಯ ವೇದಿಕೆಯನ್ನು ಒದಗಿಸುತ್ತದೆ. ಐಐಎಸ್ಸಿಯ ಮೇಲಿನ ಎಲ್ಲ ವಿಭಾಗಗಳಲ್ಲಿ ಎಂ ಟೆಕ್ ಕಾರ್ಯಕ್ರಮಗಳಿಗೆ ಮತ್ತು ಎಂ.ಡಿಎಸ್ ಗಳಿಗೆ (ಗೇಟ್ ಮಾರ್ಗದ ಮೂಲಕ ) ಪ್ರವೇಶ ಅವಕಾಶವನ್ನು ಸಿಒಎಪಿ ನಲ್ಲಿ ಮಾಡಲಾಗುವುದು . ಅಭ್ಯರ್ಥಿಗಳು ಸಿಒಎಪಿ ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಅರ್ಜಿದಾರರ ಇಂಟರ್ ಫೇಸಿನಲ್ಲಿ ಸಿಒಎಪಿ ನೋಂದಣಿ ಸಂಖ್ಯೆಯನ್ನು ನವೀಕರಿಸಬೇಕು..ಒದಗಿಸಿರುವ ಸೂಚನೆಗಳ ಪ್ರಕಾರ ನೋಂದಾಯಿಸಲು ದಯವಿಟ್ಟು ಸಿಒಎಪಿ 2021 ವೆಬ್‌ಸೈಟ್‌ಗೆ ಭೇಟಿ ನೀಡಿ.

**2.1.5** ರಕ್ಷಣಾ ಇಲಾಖೆ, ಬಿಎಆರ್ ಸಿ, ಡಿಆರ್‌ಡಿಒ, ಇಸ್ರೋ, ಎನ್‌ಎಎಲ್, ಎನ್‌ಟಿಆರ್‌ಒ, ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಬಿಡಿಎ, ಪಿಡಬ್ಲ್ಯೂಡಿ, ಸಿಪಿಆರ್ ಐ, ಎಸಿಐಡಬ್ಲ್ಯುಆರ್ ಎಂ: ಕರ್ನಾಟಕ ಸರ್ಕಾರದ ಜಲಸಂಪನ್ಮೂಲ ಇಲಾಖೆ (ಡಬ್ಲ್ಯುಆರ್‌ಡಿ) , ಡಿಆರ್ ಐಪಿ ಯೋಜನೆಯಡಿ ಜಲ ಸಂಶೋಧನೆ ಸಚಿವಾಲಯ (ಎಂಒಡಬ್ಲ್ಯುಆರ್)

ಮತ್ತು ಕೇಂದ್ರ ಜಲ ಆಯೋಗ (ಸಿಡಬ್ಲ್ಯುಸಿ) ಗಳ **ಪ್ರಾಯೋಜಿತ ಅಭ್ಯರ್ಥಿಗಳು** ಪ್ರಾಯೋಜಿತ ವರ್ಗದ ಅಡಿಯಲ್ಲಿ ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸಲು ಕಡ್ಡಾಯವಾಗಿ ಆನ್‌ಲೈನ್ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಮುದ್ರಿತ ಪ್ರತಿಯನ್ನು 2021ರ ಏಪ್ರಿಲ್ 05 ರಂದು ಅಥವಾ ಮುಂಚಿತವಾಗಿ ನಕಲಿನಲ್ಲಿ ಸಲ್ಲಿಸಬೇಕು

2.2. ಸೆಂಟರ್ ಫಾರ್ ಡಿಸೈನ್ ಅಂಡ್ ಮ್ಯಾನಫಾಕ್ಚರಿಂಗ್ ಒದಗಿಸುವ **ಪದಾರ್ಥ ವಿನ್ಯಾಸ ಮತ್ತು ಎಂಜಿನಿಯರಿಂಗ್‌ನಲ್ಲಿ ಡಿಸೈನ್ ನಲ್ಲಿ ಸ್ನಾತಕ ಪದವಿ (ಎಂ ಡಿಇಎಸ್)**

**2.2.1 ಅರ್ಹತೆ**

**ಮಾನ್ಯ ಗೇಟ್ 2019/2020/2021** ಅಥವಾ 02 ಆಗಸ್ಟ್ 2021 ರಂತೆ **ಸಿಇಇಡಿ 2021** ಸ್ಕೋರ್ ನೊಂದಿಗೆ ಎಂಜಿನಿಯರಿಂಗ್ / ತಂತ್ರಜ್ಞಾನ ವಿನ್ಯಾಸ / ವಾಸ್ತುಶಿಲ್ಪದ ಪದವಿಯಲ್ಲಿ ಕನಿಷ್ಠ ದ್ವಿತೀಯ ದರ್ಜೆ ಹೊಂದಿರುವ ಅರ್ಜಿದಾರರು ಅರ್ಜಿ ಸಲ್ಲಿಸಲು ಅರ್ಹರು.

**2.2.2 ಆಯ್ಕೆ ವಿಧಾನ:** ಆನ್‌ಲೈನ್ ವಿನ್ಯಾಸ ಆಪ್ಟಿಟ್ಯೂಡ್ ಪರೀಕ್ಷೆಗೆ ಅಭ್ಯರ್ಥಿಗಳನ್ನು ಶಾರ್ಟ್‌ಲಿಸ್ಟ್ ಮಾಡಲಾಗುತ್ತದೆ ಮತ್ತು ಒಂದುಐಐಎಸ್ಸಿ ವೆಬ್‌ಸೈಟ್‌ನಲ್ಲಿ ನೀಡಲಾದ ವೇಳಾಪಟ್ಟಿಯ ಪ್ರಕಾರ ಗೇಟ್ / ಸಿಇಡಿ ಸ್ಕೋರ್ ಆಧರಿಸಿ ಸಂದರ್ಶನಪ್ರಮುಖ ದಿನಾಂಕಗಳು. ಆನ್‌ಲೈನ್ ವಿನ್ಯಾಸದಲ್ಲಿ 70% ಗೇಟ್ / ಸಿಇಡಿ + 30% ಕಾರ್ಯಕ್ಷಮತೆಯನ್ನು ಆಧರಿಸಿ ಆಯ್ಕೆ ಮಾಡಲಾಗುತ್ತದೆ.ಆಪ್ಟಿಟ್ಯೂಡ್ ಟೆಸ್ಟ್ ಮತ್ತು ಸಂದರ್ಶನ. ಫಲಿತಾಂಶಗಳ ಪ್ರಕಟಣೆ ಮತ್ತು ಪ್ರವೇಶ ಕೊಡುಗೆಗಳ ವಿತರಣೆ ಗೇಟ್ ಸ್ಕೋರ್ ಆಧಾರಿತ ಅಭ್ಯರ್ಥಿಗಳು COAP ಮೂಲಕ ಮತ್ತು ಸಿಇಡಿ ಆಧಾರಿತ ಪತ್ರಗಳಿಗೆ ಅವಕಾಶ ನೀಡುತ್ತಾರೆಇನ್ಸ್ಟಿಟ್ಯೂಟ್ ನೇರವಾಗಿ ಅಭ್ಯರ್ಥಿಗಳಿಗೆ ಕಳುಹಿಸಲಾಗುವುದು. ಆದ್ದರಿಂದ, ಗೇಟ್ ಹೊಂದಿರುವ ಅಭ್ಯರ್ಥಿಗಳು ವಿಭಾಗ 2.1.4 ರಲ್ಲಿ ವಿವರಿಸಿದಂತೆ COAP ನಲ್ಲಿ ನೋಂದಾಯಿಸಿಕೊಳ್ಳಬೇಕು

**2.3 ಮಾಸ್ಟರ್ ಆಫ್ ಮ್ಯಾನೇಜ್ ಮೆಂಟ್ (ಎಂ ಎಂಜಿಟಿ)**

**2.3.1 ಅರ್ಹತೆ**

ಮಾನ್ಯ ಗೇಟ್ 2019/2020/2021 ಅಥವಾ 2 ಆಗಸ್ಟ್ 2021 ರಂತೆ ಸಿಎಟಿ 2020 ಅಥವಾ ಜಿಎಂಎಟಿ ಅಂಕಗಳೊಂದಿಗೆ ಎಂಜಿನಿಯರಿಂಗ್ / ತಂತ್ರಜ್ಞಾನ ಪದವಿಯಲ್ಲಿ ಕನಿಷ್ಠ ಪ್ರಥಮ ದರ್ಜೆ ಅಥವಾ ಸಮಾನ ಆರ್ಹತೆಯನ್ನು ಹೊಂದಿರುವ ಅರ್ಜಿದಾರರುಅರ್ಜಿ ಸಲ್ಲಿಸಲು ಅರ್ಹರು.

**2.3.2 ಆಯ್ಕೆ ವಿಧಾನ:**

ಐಐಎಸ್ಸಿ ವೆಬ್‌ಸೈಟ್‌ನಲ್ಲಿ ಪ್ರಮುಖ ದಿನಗಳು ಅಡಿಯ ವೇಳಾಪಟ್ಟಿಯಂತೆ ಗೇಟ್ / ಸಿಎಟಿ / ಜಿಎಂಎಟಿ ಅಂಕಗಳ ಆಧಾರದ ಮೇಲೆ ಆನ್‌ಲೈನ್ ಸಂದರ್ಶನಕ್ಕೆ ಅಭ್ಯರ್ಥಿಗಳ ಪಟ್ಟಿ ಮಾಡಲಾಗುವುದು. ಆಯ್ಕೆಯು 15% (ಗೇಟ್ / ಸಿಎಟಿ / ಜಿಎಂಎಟಿ ಅಂಕಗಳು) + 15% ಪದವಿಯಲ್ಲಿ ಕಾರ್ಯಕ್ಷಮತೆ + 30% ಸಂವಹನ ಕೌಶಲ + 40% ಆನ್‌ಲೈನ್ ಸಂದರ್ಶನ ಕಾರ್ಯಕ್ಷಮತೆ ಆಧಾರವಾಗಿರುತ್ತದೆ.

## 3. ಸಂಯೋಜಿತ /ಇಂಟಿಗ್ರೇಟೆಡ್ ಪಿಎಚ್ ಡಿ ಕಾರ್ಯಕ್ರಮಗಳು

## 1.1 ಅರ್ಹತೆ

| ವಿಭಾಗ | ಶೈಕ್ಷಣಿಕ ಅರ್ಹತೆ | ಅರ್ಹತಾ ಪರೀಕ್ಷೆ |
|---|---|---|
| ಜೀವ ವಿಜ್ಞಾನಗಳು | ಪದವಿಯಲ್ಲಿ ಕನಿಷ್ಠ ಪ್ರಥಮ ದರ್ಜೆ ಅಥವಾ ಭೌತಶಾಸ್ತ್ರ , ರಾಸಾಯನಿಕ ಅಥವಾ ಜೀವ ವಿಜ್ಞಾನಗಳು (ಜೈವಿಕ ತಂತ್ರಜ್ಞಾನ,ಔಷಧಿ, ಪಶುವೈದ್ಯಕೀಯ ಮತ್ತು ಕೃಷಿ ವಿಜ್ಞಾನಗಳನ್ನೂ ಸೇರಿದಂತೆ) ಸಮಾನ ಅರ್ಹತೆ ಅಥವಾ ಬಿಇ / ಬಿ ಟೆಕ್ ನಲ್ಲಿ ಕನಿಷ್ಠ ಪ್ರಥಮ ದರ್ಜೆ ಅಥವಾ ಸಮಾನ ಪದವಿ. | ಜಾಮ್ 2021 ನಲ್ಲಿ ಜೈವಿಕ ತಂತ್ರಜ್ಞಾನ (ಬಿಟಿ) ಅಥವಾ ರಸಾಯನಶಾಸ್ತ್ರ (ಸಿವೈ) ಅಥವಾ ಗಣಿತ (ಎಂಎ) ಅಥವಾ ಭೌತಶಾಸ್ತ್ರ (ಪಿಎಚ್) ಜೈವಿಕ ತಂತ್ರಜ್ಞಾನ (ಬಿಟಿ) |
| ರಸಾಯನ ವಿಜ್ಞಾನಗಳು | ಬಿ.ಎಸ್ಸಿ ಯಲ್ಲಿ ಕನಿಷ್ಠ ಪ್ರಥಮ ದರ್ಜೆ ಅಥವಾ ಪಿಯುಸಿ ಅಥವಾ ಸಮಾನ ಮಟ್ಟದಲ್ಲಿ ಗಣಿತವು ಮುಖ್ಯ ವಿಷಯವಾಗಿದ್ದು ರಸಾಯನಶಾಸ್ತ್ರದಲ್ಲಿ ಸಮಾನ ಪದವಿ | ಜಾಮ್ 2021 ನಲ್ಲಿ ಜೈವಿಕ ರಸಾಯನಶಾಸ್ತ್ರ (ಸಿವೈ) ಅಥವಾ ಭೌತಶಾಸ್ತ್ರ (ಪಿಎಚ್) |
| ಗಣಿತಶಾಸ್ತ್ರ | ಬಿ.ಎಸ್ಸಿ ಯಲ್ಲಿ ಕನಿಷ್ಠ ಪ್ರಥಮ ದರ್ಜೆ ಅಥವಾ ಗಣಿತವು ಮುಖ್ಯ ವಿಷಯವಾಗಿರುವ ಪದವಿ ಅಥವಾ ಬಿಇ / ಬಿ ಟೆಕ್ ಅಥವಾ ಸಮಾನ ಪದವಿ. | ಜಾಮ್ 2021 ನಲ್ಲಿ ಗಣಿತ (ಎಂಎ) ಅಥವಾ ಗಣಿತ ಅಂಕಿಅಂಶ (ಎಂಎಸ್) |
| ಭೌತವಿಜ್ಞಾನಗಳು | ಬಿ.ಎಸ್ಸಿ ಯಲ್ಲಿ ಕನಿಷ್ಠ ಪ್ರಥಮ ದರ್ಜೆ ಅಥವಾ ಭೌತಶಾಸ್ತ್ರ ಮುಖ್ಯ ವಿಷಯವಾಗಿರುವ ಪದವಿ ಅಥವಾ ಬಿಇ / ಬಿ ಟೆಕ್ ಅಥವಾ ಸಮಾನ ಪದವಿ. | ಜಾಮ್ 2021 ನಲ್ಲಿ ಭೌತಶಾಸ್ತ್ರ (ಪಿಎಚ್) ಅಥವಾ ಜೆಇಎಸ್ ಟಿ 2021 |

**3.3.3 ಆಯ್ಕೆ ವಿಧಾನ:** ಅಭ್ಯರ್ಥಿಗಳನ್ನು ಎಲ್ಲಾ ನಾಲ್ಕು ವಿಭಾಗಗಳಿಗೆ ಜೆ ಎಎಂ 2021 ಅಂಕಗಳ ಆಧಾರದಲ್ಲಿ ಮತ್ತು ಭೌತಿಕ ವಿಜ್ಞಾನಕ್ಕಾಗಿ ಜೆಇಎಸ್ ಟಿ 2021 ರಲ್ಲಿ ಪಾಸಾದವರಿಗೆ ಆನ್‌ಲೈನ್ ಸಂದರ್ಶನಕ್ಕೆ ಪಟ್ಟಿ ಮಾಡಲಾಗುವುದು . (ಎ) ರಾಸಾಯನಿಕ ವಿಜ್ಞಾನವು ಸಂದರ್ಶನದ ಕಾರ್ಯಕ್ಷಮತೆಯನ್ನು ಆಧರಿಸಿರುತ್ತದೆ; (ಬಿ) ಜೈವಿಕ, ಭೌತಿಕ ಮತ್ತು ಗಣಿತ ವಿಜ್ಞಾನವು ಅರ್ಹತಾ ಪರೀಕ್ಷೆಯಲ್ಲಿ ಮತ್ತು ಆನ್‌ಲೈನ್ ಸಂದರ್ಶನಗಳೆರಡರ ಸಂಯೋಜಿತ ಕಾರ್ಯಕ್ಷಮತೆಯನ್ನು ಆಧರಿಸಿರುತ್ತದೆ.

## 4. ಹೊರ ನೋಂದಣಿ ಕಾರ್ಯಕ್ರಮ (ಇಆರ್‌ಪಿ) ಅಡಿಯಲ್ಲಿ ಪಿಎಚ್ ಡಿ

ಈ ಕಾರ್ಯಕ್ರಮವು ಸೂಕ್ತ ಸರ್ಕಾರಿ ಸಂಸ್ಥೆಗಳಿಂದ ಮಾನ್ಯವಾಗಿರುವ (1) ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು / ಕೈಗಾರಿಕೆಗಳ ವೃತ್ತಿಪರರು ಮತ್ತು (2) ಎಂಜಿನಿಯರಿಂಗ್, ಕೃಷಿ, ಔ ಷಧಿ, ಪಶುವೈದ್ಯಕೀಯ, ವೈದ್ಯಕೀಯ ಕಾಲೇಜುಗಳು / ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರಿಗೆ ಸೀಮಿತವಾಗಿದೆ

**4.1 ಅರ್ಹತೆ**

ಶೈಕ್ಷಣಿಕ ಅರ್ಹತೆಗಳು ಸಾಮಾನ್ಯ ಅಭ್ಯರ್ಥಿಗಳಂತಿರುತ್ತವೆ. ಜೆಆರ್‌ಎಫ್‌ಗಾಗಿ ಸಿಎಸ್‌ಐಆರ್-ಯುಜಿಸಿ ನೆಟ್, ಜೆಆರ್‌ಎಫ್‌ಗಾಗಿ ಯುಜಿಸಿ-ನೆಟ್, ಡಿಬಿಟಿ ಜೆಆರ್‌ಎಫ್, ಐಸಿಎಂಆರ್ ಜೆಆರ್‌ಎಫ್ ಗೇಟ್, ಎನ್ ಬಿ ಎಚ್ ಎಂ ನಂತಹ ರಾಷ್ಟ್ರೀಯ ಪ್ರವೇಶ ಪರೀಕ್ಷೆಗಳಲ್ಲಿ ಅರ್ಹರಾಗುವುದು ಅಪೇಕ್ಷಣೀಯ ಆದರೆ ಕಡ್ಡಾಯವಲ್ಲ. ಪದವಿ ಮುಗಿಸಿದ ನಂತರ ಅಭ್ಯರ್ಥಿಯು ಪ್ರಸಕ್ತ ಸಂಸ್ಥೆಯಲ್ಲಿ ಎರಡು ವರ್ಷಗಳ ಕಾಲ ಪೂರ್ಣಾವಧಿ ಉದ್ಯೋಗ ಮುಗಿಸಿರಬೇಕು. ಅಭ್ಯರ್ಥಿಗಳು ತಮ್ಮ ಉದ್ಯೋಗ ಸಂಸ್ಥೆಗಳಿಂದ ಅಧಿಕೃತವಾಗಿ ಪ್ರಾಯೋಜಿತರಾಗಿರಬೇಕು ಮತ್ತು ಆನ್‌ಲೈನ್ ಅರ್ಜಿಯನ್ನು ಕಡ್ಡಾಯವಾಗಿ ಭರ್ತಿ ಮಾಡಬೇಕು ಮತ್ತು ಮುದ್ರಿತ ಪ್ರತಿಯನ್ನು 2021 ಏಪ್ರಿಲ್ 05 ರಂದು ಅಥವಾ ಮುಂಚಿತವಾಗಿ ನಕಲಿನಲ್ಲಿ ಸಲ್ಲಿಸಬೇಕು.

**4.2 ಆಯ್ಕೆ ವಿಧಾನ:** ಆನ್‌ಲೈನ್ ಸಂದರ್ಶನದ ಕಾರ್ಯಕ್ಷಮತೆಯನ್ನು ಆಧರಿಸುತ್ತದೆ

### ಅರ್ಜಿ ಸಲ್ಲಿಕೆ ಹೇಗೆ

ಮೇಲೆ ತಿಳಿಸಲಾದ ಎಲ್ಲಾ ಕಾರ್ಯಕ್ರಮಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿಗಳು ಸಿಗುತ್ತದೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು http://www.iisc.ac.inಗೆ ಭೇಟಿ ನೀಡಿ-> **Apply Online** ಗೆ ಕ್ಲಿಕ್ಕಿಸಿ

| ವರ್ಗ | ಅರ್ಜಿ ಶುಲ್ಕ |
|---|---|
| ಸಾಮಾನ್ಯ/ ಹಿಂದುಳಿದ ವರ್ಗ/ ಆರ್ಥಿಕವಾಗಿ ದುರ್ಬಲ ವರ್ಗ | 800 ರೂ |

| | |
|---|---|
| ಪರಿಶಿಷ್ಟ ಜಾತಿ/ವರ್ಗ/ ಅಂಗವಿಕಲರು | 400 ರೂ |
| ಇಆರ್ ಪಿ ಅಭ್ಯರ್ಥಿ(ಎಲ್ಲ ವರ್ಗ) | 2000 ರೂ |
| ಮೇಲೆ ಹೇಳಿರುವ ಸಂಸ್ಥೆಯಿಂದ ಪ್ರಾಯೋಜಿತರಾದ ಅಭ್ಯರ್ಥಿಗಳು | 800 ರೂ |
| ಶುಲ್ಕವನ್ನು ಮರುಪಾವತಿಸುವುದಿಲ್ಲ. any bank or payment gateway service charges must be borne by the applicant | |

ಪಾವತಿಯ ಆಯ್ಕೆ: ಆನ್‌ಲೈನ್ ಪಾವತಿ - ನೆಟ್-ಬ್ಯಾಂಕಿಂಗ್, ವೀಸಾ ಕಾರ್ಡ್ / ಮಾಸ್ಟರ್ ಕಾರ್ಡ್, ಡೆಬಿಟ್ / ಕ್ರೆಡಿಟ್ ಕಾರ್ಡ್‌ಗಳು.

## ಪ್ರಮುಖ ದಿನಗಳು

| | |
|---|---|
| ಅರ್ಜಿಗಳ ಆನ್‌ಲೈನ್ ಸಲ್ಲಿಕೆಗೆ ವೆಬ್‌ಸೈಟ್ ತೆರೆಯುವುದು | **22.2.2021** |
| ಆನ್ಲೈನ್ ಅರ್ಜಿ ಸಲ್ಲಿಕೆಗೆ ಕೊನೆ ದಿನ 30.04.2021 (ವೆಬ್‌ಸೈಟ್ 23:59 ಗಂಟೆಗೆ ಮುಚ್ಚುತ್ತದೆ) | **31.03.2021** |

ಟಿಪ್ಪಣಿಗಳು:

1. ಭಾರತ ಸರ್ಕಾರದ ನಿಯಮಗಳ ಪ್ರಕಾರ: ಎಸ್‌ಸಿ / ಎಸ್‌ಟಿ / ಒಬಿಸಿ / ಇಡಬ್ಲ್ಯೂಎಸ್ / ಅಂಗವಿಕಲ ವ್ಯಕ್ತಿಗಳು (ಪಿಡಬ್ಲ್ಯುಡಿ) ಮತ್ತು ಕಾಶ್ಮೀರ-ವಲಸೆಗಾರರು (ಕೆಎಂ), ಕಾಶ್ಮೀರ ಕಣಿವೆಯಲ್ಲಿ ವಾಸಿಸುವ ಕಾಶ್ಮೀರ ಪಂಡಿತರು / ಕಾಶ್ಮೀರ ಹಿಂದೂ ಕುಟುಂಬಗಳಿಗೆ ವಲಸೆರಹಿತ) ಮೀಸಲಾತಿ / ರಿಯಾಯಿತಿ / ಸಡಿಲಿಕೆ

2. ಎಸ್‌ಸಿ / ಎಸ್‌ಟಿ ಅಭ್ಯರ್ಥಿಗಳಿಗೆ ಅರ್ಹತಾ ಪರೀಕ್ಷೆಯ ಕನಿಷ್ಠ ಅರ್ಹತೆಯನ್ನು “ಪಾಸ್ ಕ್ಲಾಸ್” ಎಂದು ಸಡಿಲಿಸಲಾಗಿದೆ

3. ಇಡಬ್ಲ್ಯೂಎಸ್ / ಒಬಿಸಿ ಅಡಿಯಲ್ಲಿ ಅರ್ಜಿ ಸಲ್ಲಿಸುವ ಅರ್ಜಿದಾರರು (http://www.ncbc.nic.inನಲ್ಲಿನ ಒಬಿಸಿಯ ಕೇಂದ್ರ ಪಟ್ಟಿಯ ಪ್ರಕಾರ) ಸಂದರ್ಶನ ಮತ್ತು ಪ್ರವೇಶದ ಸಮಯದಲ್ಲಿ 2021ರ ಮಾರ್ಚ್ 31ರ ನಂತರ (ಅಂದರೆ ಹವ: 2021-22) ನೀಡಲಾದ ಮಾನ್ಯ ಇಡಬ್ಲ್ಯೂಎಸ್ / ಒಬಿಸಿ-ಎನ್‌ಸಿಎಲ್ ಪ್ರಮಾಣಪತ್ರಗಳನ್ನು ಹೊಂದಿರತಕ್ಕದ್ದು.

4. ಎಲ್ಲಿ ಅನ್ವಯವಾಗುವುದೋ ಅಲ್ಲಿ ಆನ್‌ಲೈನ್ ವಿಧಾನದಲ್ಲಿ ಸಂದರ್ಶನಗಳನ್ನು ನಡೆಸಲಾಗುತ್ತದೆ.

5. **ವಿದ್ಯಾರ್ಥಿವೇತನಗಳು** :

ಸಂಸ್ಥೆಗೆ ಸೇರುವ ಎಲ್ಲಾ ನಿಯತ ವಿದ್ಯಾರ್ಥಿಗಳು (ಎಂ.ಎಂ.ಜಿ.ಟಿ ಹೊರತುಪಡಿಸಿ) ತಮ್ಮ ಪ್ರವೇಶ ವಿಧಾನದ ಆಧಾರದಲ್ಲಿ ಎಂ ಎಚ್ ಆರ್ಡಿ/ ಸಿಎಸ್ ಐ ಆರ್/ ಯುಜಿಸಿ/ ಐಸಿಎಂಆರ್/ ಡಿಬಿಟಿ/ ಡಿಎಸ್ ಟಿ/ ಎಐಸಿಟಿಇ/ ಡಿಎಇ(ಎನ್ ಬಿ ಎಚ್ ಎಂ) ಗಳಿಂದ ವಿದ್ಯಾರ್ಥಿ ವೇತನಕ್ಕೆ ಅರ್ಹರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಲವು ಭಾರತೀಯ ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳಿಂದ ಮತ್ತು ವ್ಯಾಪಾರ ಸಂಸ್ಥೆಗಳಿಂದ ವಿದ್ಯಾರ್ಥಿ ವೇತನ ಸಿಗಲಿದೆ.

6. ಅರ್ಜಿದಾರರು ಪ್ರವೇಶ ಸಂಬಂಧಿತ ನವೀಕರಣಗಳಿಗೆ ನಿಯತವಾಗಿ http://www.iisc.ac.in/admissions ವೆಬ್‌ಸೈಟ್ ಮತ್ತು ಪ್ರವೇಶ ಪೋರ್ಟಲ್‌ಗೆ ಭೇಟಿ ನೀಡುವಂತೆ ಸೂಚಿಸಲಾಗಿದೆ.

ಎಲ್ಲ ಪ್ರವೇಶ ಸಂಬಂಧಿ ವಿಷಯಗಳು, ಸಂಶೋಧನೆ ವಿಷಯಗಳು ಇತ್ಯಾದಿಗಳ ಪರಿಚಯ ಮಾಡಿಕೊಳ್ಳಲು ಅರ್ಜಿದಾರರು ತಾವು ಅರ್ಜಿ ಹಾಕುತ್ತಿರುವ ವಿಭಾಗಗಳ ವೆಬ್‌ಸೈಟ್‌ಗೆ ಭೇಟಿ ನೀಡುವಂತೆ ಸೂಚಿಸಲಾಗಿದೆ

**ನೋಂದಣಿದಾರರು**